ಮೂ. ದಾ. ನಂ. 109/2015

ಡಿ.ಡಬ್ಲ್ಯು 2

(ಇಂದು ದಿನಾಂಕ 13-10-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ಪ್ರತಿವಾದಿ ಪರ ಶ್ರೀ ಬಿ.ಎಸ್.ಯು. ವಕೀಲರಿಂದ-**

ನಾನು ಈ ಪ್ರಕರಣದಲ್ಲಿ ಪ್ರತಿವಾದಿ ಪರ ಸಾಕ್ಷಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ಅನಂತ ಗಣಪಯ್ಯ ಹರಿಕಂತ್ರ ರವರು ಪ್ರತಿವಾದಿಯರ ಪರವಾಗಿ ಬರೆದುಕೊಟ್ಟ ವಿಲ್ ನಾಮೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ವಿಲ್ ನಾಮೆಯಲ್ಲಿ ಇರುವ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ವಿಲ್ ನಾಮೆಯನ್ನು ನಿ.ಡಿ. 7 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಡಿ. 7(ಎ) ಎಂದು ಗುರುತಿಸಲಾಯಿತು. ಸದರಿ ವಿಲ್ ನಾಮೆಗೆ ಅನಂತ ಗಣಪಯ್ಯ ಹರಿಕಂತ್ರ ರವರು ಪ್ರತಿ ಪುಟಕ್ಕೆ ನನ್ನ ಸಮಕ್ಷಮದಲ್ಲಿ ಸಹಿ ಮಾಡಿದ್ದು, ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಪ್ರತಿ ಪುಟದಲ್ಲಿ ಇರುವ ಅನಂತ ಗಣಪಯ್ಯ ಹರಿಕಂತ್ರ ರವರ ಸಹಿಯನ್ನು ನಿ.ಡಿ. 7 (ಬಿ) ಎಂದು ಗುರುತಿಸಲಾಯಿತು.

**(ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್. ಜಿ. ಎಮ್. ವಕೀಲರು ಸಮಯ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ